ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಜಿಲ್ಲೆ, ಬಳ್ಳಾರಿ-583101

**OFFICE OF THE DEPUTY COMMISSIONER, BELLARY DISTRICT, BELLARY-583101**

Telephone : 08392-277100. Fax : 08392-272538 Email: dcbellary@gmail.com

ನಂ.ಕಂ.ಸಿಬ್ಬಂದಿ.2/ 48/ 2015-16 ದಿನಾಂಕ: 26 -02-2016

## : : ಜವಾನ (ಡಿ ದರ್ಜೆ) ತಾತ್ಕಾಲಿಕ ಆಯ್ಕೆ ಅಧಿಸೂಚನೆ : :

ವಿಷಯ: ಬಳ್ಳಾರಿ ಜಿಲ್ಲೆಯಲ್ಲಿ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 05 ಹಾಗೂ ಸ್ಥಳೀಯೇತರ ವೃಂದಲ್ಲಿ ಖಾಳಿ ಇರುವ 12 ಒಟ್ಟು 17 ಜವಾನ (ಡಿ ದರ್ಜೆ) ಹುದ್ದೆಗಳನ್ನು ಭರ್ತಿ ಮಾಡುವ ಸಂಭಂಧ ತಾತ್ಕಾಲಿಕ ಆಯ್ಕೆಯ ಅಧಿಸೂಚನೆ ಹೊರಡಿಸುವ ಬಗ್ಗೆ.

ಉಲ್ಲೇಖ: ಈ ಕಾರ್ಯಾಲಯದ ಅಧಿಸೂಚನೆ ಸಮ ಸಂಖ್ಯೆ ದಿನಾಂಕ:- 18.08.2015

-***-

ಈ ಕಾರ್ಯಾಲಯದ ಉಲ್ಲೇಖಿತ ಅಧಿಸೂಚನೆಯ ದಿನಾಂಕ:- 18.08.2015 ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 05 ಹಾಗೂ ಸ್ಥಳೀಯೇತರ ವೃಂದಲ್ಲಿ ಖಾಲಿ ಇರುವ 12 ಒಟ್ಟು 17 ಜವಾಣ (ಡಿ ದರ್ಜೆ) ಹುದ್ದೆಗಳನ್ನು ಭರ್ತಿ ಮಾಡುವ ಸಂಭಂಧ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು 1:5 ರ ಅನುಪಾತದಲ್ಲಿ ಪ್ರಚುರಪಡಿಸಲಾಗಿ ದಿನಾಂಕ:- 26.08.2015 ರಂದು ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಪರಿಶಿಲನೆ ಕಾರ್ಯ ಕೈಗೊಳ್ಳಲಾಗಿರುತ್ತದೆ. ಸದರಿ ತಾತ್ಕಾಲಿಕ ಪರಿಶೀಲನಾ ಪಟ್ಟಿಗೆ ನಮೂದುಗಳನ್ನು ಸರಿಪಡಿಸಲು ಕೋರಿ ಒಟ್ಟು 15 ಆಕ್ಷೇಪಣೆಗಳು ಸ್ವೀಕೃತಿಯಾಗಿರುತ್ತವೆ. ಅದರಂತೆ ಹುದ್ದೆಗಾಗಿ ಸಲ್ಲಿಸಿದ ಎಲ್ಲಾ ಅರ್ಜಿಗಳನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲನೆ ಮಾಡಿ, ಅಗತ್ಯ ಎನಿಸಿದಲ್ಲಿ ಡಾಟಾ ತಿದ್ದುಪಡಿ ಮಾಡಲಾಗಿದೆ. ಅದರಂತೆಯೆ ಆಕ್ಷೇಪಣೆಗಳಿಗೆ ಸೂಕ್ತ ಹಿಂಬರಹ ನೀಡುತ್ತಾ, ಈ ಕೆಳಕಂಡ ಷರತ್ತಿಗೆ ಒಳಪಟ್ಟು, ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು 1:1 ಅನುಪಾತದಲ್ಲಿ ಪ್ರಚುರಪಡಿಸಲಾಗಿದೆ. ಸದರಿ ಅಧಿಸೂಚನೆಗೆ ಆಕ್ಷೇಪಣೆಗಳು ಇದ್ದಲ್ಲಿ ದಿನಾಂಕ:- 08-03-2016 ರ ಒಳಗಾಗಿ ಜಿಲ್ಲಾಧಿಕಾರಿಗಳ ಕಛೇರಿ ಬಳ್ಳಾರಿ ಇಲ್ಲಿ ಖುದ್ದಾಗಿ ಸಲ್ಲಿಸತಕ್ಕದ್ದು.

ಷರತ್ತು:

ಆಯ್ಕೆಯಾದ ಅಭ್ಯರ್ಥಿಗಳ ಎಲ್ಲಾ ಮೂಲ ದಾಖಲೆಗಳ ನೈಜತೆಯ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದ ಅಭಿಪ್ರಾಯಕ್ಕೆ ಒಳಪಡಿಸುತ್ತಾ, ಅವುಗಳು ಸುಳ್ಳು ಎಂದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಪಡಿಸಲಾಗುತ್ತದೆ.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು **website** www.ballari.nic.in **OR** www.bellary.nic.in ನಲ್ಲಿ ನೋಡಿಕೊಳ್ಳಬಹುದು.

(ಸಮೀರ್ ಶುಕ್ಲ) ಭಾ.ಆ.ಸೇ
ಅಧ್ಯಕ್ಷರು
ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಬಳ್ಳಾರಿ.

ಪ್ರತಿಯನ್ನು:- ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ ಇವರಿಗೆ ಕಳುಹಿಸುತ್ತಾ ಮೇಲಿನ ವಿಷಯವನ್ನು ಎಲ್ಲ ಸ್ಥಳೀಯ ರಾಜ್ಯಮಟ್ಟದ ದೈನಂಧಿನ ಕನ್ನಡ ದಿನ ಪತ್ರಿಕೆಗಳಲ್ಲಿ ಪ್ರಚುರಪಡಿಸಲು ಕೋರಿದೆ.